ಅ) ಪುರಸಭಾ ಗಡಿಯಿಂದ 5 ಕಿ.ಮೀ ವ್ಯಾಪ್ತಿಯವರೆಗೆ ರೈತರು ಅಕ್ರಮವಾಗಿ ಸಾಗುವಳಿಮಾಡಿದ ಜಮೀನನ್ನು ಸಕ್ರಮಗೊಳಿಸಲು ಸರಕಾರವು ಅವಕಾಶವನ್ನು ಮಾಡಿಕೊಟ್ಟಿದೆಯೇ; ಹಾಗಿದ್ದಲ್ಲಿ ಈ ಸಂಬಂಧದ ವಿವರಗಳೇನು;

ಆ) ಸದರಿ ಜಮೀನುಗಳನ್ನು ಸಕ್ರಮಗೊಳಿಸುವಲ್ಲಿ ವಿಳಂಬವಾಗುವುದನ್ನು ತಪ್ಪಿಸಲು ಸರಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು)

ಅ) - ಇಲ್ಲ -

ಆ) - ಉದ್ಭವಿಸುವುದಿಲ್ಲ -

ಚಿಕ್ಕೋಡಿ ಕ್ಷೇತ್ರದ ಜೈನಾಪುರ ಗ್ರಾಮದ ಸರ್ವೆನಂಬರ್ 54 -B ಜಮೀನಿನ ಗುತ್ತಿಗೆ ಅವಧಿ ಮುಗಿದ ಜಮೀನನ್ನು ವಶಪಡಿಸಿಕೊಳ್ಳುವುದು

1778 (2252) ಶ್ರೀ ಕಟ್ಟಿಮನಿ ಮನೋಹರ ಶಿವಪುತ್ರ (ಚಿಕ್ಕೋಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕೋಡಿ ಕ್ಷೇತ್ರದ ಜೈನಾಪುರ ಗ್ರಾಮದ ಸರ್ವೆ ನಂ.54:ಬ ಜಮೀನಿನ ಗುತ್ತಿಗೆ ಅವಧಿ 1982ರಲ್ಲಿ ಮುಕ್ತಾಯವಾದರೂ ಆ ಜಮಿನನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳದಿರಲು ಕಾರಣವೇನು;

ಆ) ಈ ಜಮೀನನ್ನು ಬೇರೆಯವರು ಅನಧಿಕೃತವಾಗಿ ಸ್ವಾಧೀನ ಪಡಿಸಿಕೊಂಡು ದುರುಪಯೋಗಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಇ) ಸರ್ಕಾರದ ಈ ನಿರ್ಲಕ್ಷಕ್ಕೆ ಕಾರಣವೇನು; ಕೂಡಲೇ ವಶಪಡಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) ಸಿದ್ಧಾರ್ಥ ಹರಿಜನ ಸಾಮೂಹಿಕ ಬೇಸಾಯ ಸಹಕಾರಿ ಸಂಘ ಇವರಿಗೆ ಸದರಿ ಜಮೀನು 1972ರಲ್ಲಿ 10 ವರ್ಷ ಗುತ್ತಿಗೆ ಆಧಾರ ನೀಡಲಾಗಿದ್ದು ಇದುವರೆಗೆ ಗುತ್ತಿಗೆ ಅವಧಿ ಮುಂದುವರೆಸಲು ಅರ್ಜಿ ಸಲ್ಲಿಸಿಲ್ಲ.

ಸದರಿ ಸಂಘದವರು ಗುತ್ತಿಗೆ ಅವಧಿಯನ್ನು ಮುಂದುವರೆಸಲು ದಿ: 14.1.2003ರಂದು ಅರ್ಜಿ ಸಲ್ಲಿಸಿರುವರು. ಈ ಸಂಘದವರು 1982 ರಿಂದ ಇಲ್ಲಿಯವರೆಗೆ ಅನಧಿಕೃತವಾಗಿ ಅವರ ಕಬ್ಜೆಯಲ್ಲಿ ಹೊಂದಿರುವುದು ಈಗ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದಕಾರಣ ವಶಕ್ಕೆ ತೆಗೆದುಕೊಂಡಿಲ್ಲ.

ಇ) ಹೌದು.

ಈ) 'ಅ' ಮತ್ತು 'ಆ' ಪ್ರಶ್ನೆ ಉತ್ತರದಿಂದಾಗಿ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ. ಸದರಿ ಜಮೀನು ಸರ್ಕಾರದ ವಶಕ್ಕೆ ಪಡೆಯಲು ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ನಿರ್ವಹಣೆ

1779 (2241) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆ ಸೇರಿದ ಎಷ್ಟು ಕಿ.ಮೀ. ಜಿಲ್ಲಾ ಮುಖ್ಯ ರಸ್ತೆ ಇರುವುದು; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ರಸ್ತೆಗಳ ನಿರ್ವಹಣೆಗಾಗಿ ಕಳೆದ ಸಾಲು ಹಾಗೂ ಈ ಸಾಲಿನಲ್ಲಿ ಲೆಕ್ಕಶೀರ್ಷಿಕೆ 3054 ಹಾಗೂ 5054ರ ಅಡಿಯಲ್ಲಿ ಎಷ್ಟು ಹಣ ಒದಗಿಸಲಾಗಿತ್ತು; ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಈ ಶೀರ್ಷಿಕೆಯಲ್ಲಿ ಹಣ ಬಿಡುಗಡೆ ಆಗದೆ ಇರುವುದರಿಂದ ರಸ್ತೆಗಳನ್ನು ನಿರ್ವಹಣೆ ಮಾಡದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ

ಈ) ಹಣ ಬಿಡುಗಡೆ ಮಾಡದೇ ಇರುವುದರಿಂದ ನಿರ್ವಹಣೆ ಕೆಲಸ ಸಂಪೂರ್ಣವಾಗಿ ಸ್ಥಗಿತಗೊಂಡ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ;

ಉ) ಹಾಗಿದ್ದಲ್ಲಿ, ಸರ್ಕಾರ ಹಣ ಬಿಡುಗಡೆ ಮಾಡಲು ಯಾವ ಕ್ರಮ ಕೈಗೊಂಡಿದೆ ಹಾಗೂ ಎಷ್ಟು ಹಣ ಬಿಡುಗಡೆ ಮಾಡಲಾಗುವುದು; (ಜಿಲ್ಲಾವಾರು ಮಾಹಿತಿ ಒದಗಿಸುವುದು)?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿರುವಂತೆ 28247 ಕಿಮೀ ಉದ್ದ ಜಿಲ್ಲಾ ಮುಖ್ಯ ರಸ್ತೆ ಇರುವುದು. ಜಿಲ್ಲಾವಾರು ವಿವರ ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ.

ಆ) ರಸ್ತೆಗಳ ನಿರ್ವಹಣೆಗಾಗಿ ಶೀರ್ಷಿಕೆ 5054ರಲ್ಲಿ ಹಣ ಒದಗಿಸುವುದಿಲ್ಲ. ಲೆಕ್ಕ ಶೀರ್ಷಿಕೆ 3054ರಲ್ಲಿ ರಸ್ತೆಗಳ ನಿರ್ವಹಣೆ ಮಾಡುತ್ತಿದ್ದು ಹಣದ ವಿವರ ಕೆಳಗೆ ನೀಡಿದೆ.

ವರ್ಷ	ಅನುದಾನ (ರೂ. ಲಕ್ಷಗಳಲ್ಲಿ)	ಹಣ ಭರವಸೆ ಪತ್ರ (ರೂ. ಲಕ್ಷಗಳಲ್ಲಿ)
2001-2002	10488.31	8911.31
2002-2003	11736.39	8156.47
ಒಟ್ಟು	22224.70	17067.78

ಇ) ರಸ್ತೆಗಳ ನಿರ್ವಹಣೆಗೆ ಲೆ.ಶೀ. 3054 ಯೋಜನೇತರ ಅಡಿಯಲ್ಲಿ ಹಣ ಬಿಡುಗಡೆಯಾಗುತ್ತಿದ್ದು, ಈ ಹಣದಲ್ಲಿ ರಸ್ತೆಗಳ ನಿರ್ವಹಣೆಯನ್ನು ಮಾಡಲಾಗುತ್ತಿದೆ.

ಈ) ಹಣ ಬಿಡುಗಡೆಯಾಗುತ್ತಿರುವುದರಿಮದ, ರಸ್ತೆಗಳ ನಿರ್ವಹಣೆ ಕೆಲಸ ಸ್ಥಗಿತಗೊಂಡಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಅನುಬಂಧ-1

District wise details of Road length in Karnataka (as on 31.3.2001)

(Length in Kms)

Sl.	Name of the District	National Highways	State Highway	major District Roads	Total
1	2	3	4	5	6
1.	Bangalore (Urban)	143	194	381	718
2.	Bangalore (Rural)	276	374	1045	1695

1	2	3	4	5	6
3.	Tumkur	195	471	1902	2568
4.	Kolar	129	433	1598	2160
5.	Mysore	79	338	1038	1455
6.	Chamarajanagar	160	106	658	924
7.	Mandya	73	244	1340	1657
8.	Shimoga	222	402	1229	1853
9.	Chitradurga	170	485	888	1543
10.	Davangere	85	263	992	1340
11.	Hassan	167	480	1668	2315
12.	Chikamagalur	124	315	1251	1690
13.	Dakshina Kannada	177	338	849	1364
14.	Udupi	142	283	631	1056
15.	Kodagu	0	311	804	1115
	South Zone	**2142**	**5037**	**16274**	**23453**
16.	Dharwar	189	117	599	905
17.	Haveri	103	197	742	1042
18.	Gadag	73	176	663	912
19.	Uttra Kannada	329	669	801	1799
20.	Belgaum	201	732	2331	3264
21.	Bijapur	180	423	1202	1805
22.	Bagalkote	126	330	1052	1508
23.	Bellary	181	300	1135	1616
24.	Raichur	0	505	638	1143
25.	Koppal	129	270	537	936
26.	Gulbarga	0	797	1510	2307
27.	Bidar	75	276	763	1114
	North Zone	**1586**	**4792**	**11973**	**18351**
	State Total	**3728**	**9829**	**28247**	**41804**

ಅನುಬಂಧ - 2

ಎಲ್‌ಎಕ್ಕೂ 2241

2001-02 ಮತ್ತು 2002-03ರ ಸಾಲಿನಲ್ಲಿ ಲೆಕ್ ಶೀರ್ಷಿಕೆ 3054 ಯೋಜನೇತರ ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನ ಹಾಗೂ ಹಣ ಭರವಸೆ ಪತ್ರದ ಜಿಲ್ಲಾವಾರು ವಿವರ.

	ಉತ್ತರ ವಲಯ	(ಲಕ್ಷ ರೂ.ಗಳಲ್ಲಿ)		(ಲಕ್ಷ ರೂ.ಗಳಲ್ಲಿ)	
		2001-2002		2002-03	
ಕ್ರ.ಸಂ.	ಜಿಲ್ಲೆ	ಅನುದಾನ	ಹಣ ಭರವಸೆ	ಅನುದಾನ	ಹಣ ಭರವಸೆ ಪತ್ರ
1.	ಧಾರವಾಡ	192.15	151.45	262.55	188.50

1	2	3	4	5	6
2.	ಹಾವೇರಿ	247.65	203.16	429.00	182.00
3.	ಗದಗ	192.78	202.93	266.50	126.50
4.	ಕಾರವಾರ	415.13	255.93	559.26	268.00
5.	ಬೆಳಗಾವಿ	321.38	305.09	399.68	260.50
6.	ಚಿಕ್ಕೋಡಿ	405.04	392.14	552.70	437.24
7.	ಬಿಜಾಪುರ	328.91	289.97	446.00	245.00
8.	ಬಾಗಲಕೋಟೆ	290.57	257.34	424.35	271.59
9.	ಗುಲ್ಬರ್ಗಾ	292.76	308.38	288.00	156.50
10.	ಯಾದಗೀರ	510.93	248.06	300.00	233.50
11.	ಬೀದರ್	205.32	223.44	260.00	332.64
12.	ಬಳ್ಳಾರಿ	294.67	248.96	338.00	271.50
13.	ರಾಯಚೂರ	255.89	318.45	272.00	231.00
14.	ಕೊಪ್ಪಳ	142.12	180.42	246.00	155.00
	ಒಟ್ಟು	4095.30	3685.23	5044.04	3359.47

	ದಕ್ಷಿಣ ವಲಯ	(ಲಕ್ಷ ರೂ.ಗಳಲ್ಲಿ)		(ಲಕ್ಷ ರೂ.ಗಳಲ್ಲಿ)	
		2001-2002		2002-03	
ಕ್ರ.ಸಂ.	ಜಿಲ್ಲೆ	ಅನುದಾನ	ಹಣ ಭರವಸೆ	ಅನುದಾನ	ಹಣ ಭರವಸೆ ಪತ್ರ
1.	ಬೆಂಗಳೂರು ನಗರ	31.00	54.00	57.69	42.00
2.	ಬೆಂಗಳೂರು ಗ್ರಾಮಾಂತರ	875.25	779.50	836.61	509.00
3.	ತುಮಕೂರು	749.73	464.81	666.18	408.36
4.	ಕೋಲಾರ	427.15	570.40	554.47	456.00
5.	ಮೈಸೂರು	375.73	392.45	621.28	423.91
6.	ಚಾಮರಾಜನಗರ	200.00	164.00	277.38	130.00
7.	ಮಂಡ್ಯ	853.49	652.45	543.10	791.37
8.	ಶಿವಮೊಗ್ಗ	367.50	312.06	402.98	294.00
9.	ಚಿತ್ರದುರ್ಗ	595.50	241.38	300.17	262.00
10.	ದಾವಣಗೆರೆ	344.80	251.21	325.88	294.50
11.	ಹಾಸನ	462.00	509.05	626.71	273.50
12.	ಚಿಕ್ಕಮಗಳೂರು	312.05	204.24	477.16	237.00
13.	ದಕ್ಷಿಣ ಕನ್ನಡ	311.36	351.30	325.57	310.00
14.	ಉಡುಪಿ	230.95	122.31	214.21	183.00
15.	ಕೊಡಗು	256.50	156.92	462.96	183.00
	ಒಟ್ಟು	6393.01	5226.08	6692.35	4797.64